ಒತ್ತಾಯಪೂರ್ವಕವಾಗಿ ಯಾರ ಮೇಲಾದರೂ ಅಧಿಕಾರ ಚಲಾಯಿಸುವಂತೆ ಸರ್ಕಾರಕ್ಕೆ ಕಾನೂನು ಅವಕಾಶ ನೀಡುತ್ತದೆಯೆ?

ಅದರಲ್ಲೂ 'ನಾನು ಮೊದಲೇ ಬಂದೀಖಾನೆಯಲ್ಲಿ ಇದ್ದೆ; ನನಗೂ, ನಂತರದ ಮೊಕದ್ದಮೆಗಳಿಗೂ ಯಾವ ಸಂಬಂಧವೂ ಇಲ್ಲ' ಎಂದು ಜಿಲ್ಲಾ ನ್ಯಾಯಾಧೀಶರಿಗೆ ಬರವಣಿಗೆಯ ಮೂಲಕ ತಿಳಿಸಿರುವಂತಹ ವ್ಯಕ್ತಿಯೊಬ್ಬನ ಮೇಲೆ ಇದ್ಯಾವ ಬಗೆಯ ದಬ್ಬಾಳಿಕೆ? ಹಾಗೆಯೇ ಮ್ಯಾಜಿಸ್ಟ್ರೇಟರು ಮೂರು ಮಂದಿಯ ಪಶುಬಲದ ನೆರವು ಪಡೆದು ಬಲವಂತವಾಗಿ ನನ್ನ ಹೆಬ್ಬೆಟ್ಟು ಒತ್ತಿಸುತ್ತಾರಲ್ಲಾ, ಅದು ಯಾವ ಕಾನೂನಿನಡಿ, ಸ್ವಲ್ಪ ಹೇಳಿ? ಇವೆರಡೂ ಕಾನೂನುಗಳು ಯಾವುದೆಂದು ನೀವು ಹೇಳಲು ಆಗದಿದ್ದರೆ, ಅನೇಕರ ಕೊಲೆಯ ಪ್ರಯತ್ನ ಮಾಡಿದ ತಪ್ಪಿತಸ್ಥರಾಗುತ್ತೀರಿ.'

ಲೋಹಿಯಾ ಪರವಾಗಿ ರಾಜ್‌ನಾರಾಯಣ್ ಹಾಕಿದ ಹೇಬಿಯಸ್ ಕಾರ್ಪಸ್ ಅರ್ಜಿ ಹೈಕೋರ್ಟಿನೆದುರು ಬಂತು. ಲೋಹಿಯಾ ಕೋರ್ಟಿನೆದುರು ಹಾಜರಾದರು.

ಲೋಹಿಯಾ: ನಾಗರಿಕ ಹಕ್ಕುಗಳ ಹತ್ಯೆ ಇನ್ನು ಮುಂದಾದರೂ ನಿಲ್ಲಲಿ ಎಂದು ನಾನೊಬ್ಬ ಲೀಡರ್ ಆಗಿ ಕೇಳಿಕೊಳ್ಳುತ್ತಿಲ್ಲ, ಒಬ್ಬ ಸಾಮಾನ್ಯ ಪ್ರಜೆಯಾಗಿ ಕೇಳಿಕೊಳ್ಳುತ್ತಿದ್ದೇನೆ. ನಾನು ಸೆರೆಮನೆಗೆ ಹೋಗುವುದನ್ನು ಇಷ್ಟಪಡುವುದಿಲ್ಲ; ಆದರೆ ಬೇರೆ ಉಪಾಯವಿಲ್ಲ. ನಾನು ಬಾಲ್ಯದಿಂದಲೂ ಗಾಂಧೀಜಿಯವರ ಜೊತೆ ಇದ್ದೆ; ನಾನು ದಮನ, ಶೋಷಣೆಗಳನ್ನು ಸಹಿಸಲಾರೆ.

ನ್ಯಾಯಮೂರ್ತಿ ಮುಲ್ಲಾ: ನೀವು ಲೀಡರ್ ಥರಾ ಮಾತಾಡ್ತಾ ಇದೀರಿ.

ಲೋಹಿಯಾ: ನೋ ನೋ. ನನಗೆ ತುಂಬಾ ನೋವಾಗಿದೆ. ನಾನು ನನ್ನ ಹೆಬ್ಬೆಟ್ಟನ್ನು ನೋಡಿದಾಗಲೆಲ್ಲ ಇದು ಹೇಗೆ ಬಾಗಿತು ಎಂದು ಆಶ್ಚರ್ಯವಾಗುತ್ತದೆ. ನಾನು ಈ ದೇಶದ ಸಾವಿರಾರು ದುಃಖಿತರ ಪರವಾಗಿ ಇಲ್ಲಿ ನಿಂತಿದ್ದೇನೆ. ನಿಮಗೆ ಇಂಥ ಸ್ಥಿತಿ ಬಾರದಿರಲಿ ಎಂದು ಹಾರೈಸುತ್ತೇನೆ.

ಮುಲ್ಲಾ: ಯಾರಿಗೆ ಗೊತ್ತು?

ಲೋಹಿಯಾ: ನೀವು ನನ್ನ ಗೆಳೆಯರಾಗುವುದಕ್ಕಿಂತ ಹೆಚ್ಚಿನ ಸಂತೋಷ ಯಾವುದಿದೆ?

ಈ ಪ್ರಕರಣದ ಬಗ್ಗೆ ಇಬ್ಬರು ನ್ಯಾಯಾಧೀಶರು ಭಿನ್ನ ತೀರ್ಪು ಕೊಟ್ಟರು. ಪ್ರಕರಣ ಮುಖ್ಯ ನ್ಯಾಯಾಧೀಶರೆದುರು ಬಂತು; ಅವರು ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ವಜಾ ಮಾಡಿದರು. ಲೋಹಿಯಾ ಸುಪ್ರೀಂ ಕೋರ್ಟಿಗೆ ಅಪೀಲು ಹೋದರು. ಸರ್ಕಾರ ಪ್ರಕರಣವನ್ನು ಹಿಂದಕ್ಕೆ ತೆಗೆದುಕೊಂಡಿತು!

ಪ್ರತಿ ಸಲ ಜೈಲಿಗೆ ಹೋದಾಗಲೂ ಇಂಡಿಯನ್ ಪೀನಲ್ ಕೋಡಿನ ಬಗೆಬಗೆಯ ಕಲಮುಗಳ ಕ್ರೌರ್ಯ ಲೋಹಿಯಾರ ಅರಿವಿಗೆ ಬರತೊಡಗಿತು. ವಸಾಹತುಶಾಹಿ ಸರ್ಕಾರ ತನ್ನ ಅನುಕೂಲಕ್ಕೆಂದು ಮಾಡಿಕೊಂಡಿದ್ದ ಕಾಯ್ದೆಗಳನ್ನು ಸ್ವತಂತ್ರ ಭಾರತ ಮಕ್ಕಿಕಾಮಕ್ಕಿಯಾಗಿ ಅನುಸರಿಸಿಕೊಂಡು ಬರುತ್ತಿತ್ತು; ಇದನ್ನು ಲೋಹಿಯಾ ಪ್ರಶ್ನಿಸುತ್ತಲೇ ಇದ್ದರು.

ವಸಾಹತು ಕಾಲದಿಂದ ಬಂದ ಸಂಸ್ಥೆಗಳು, ಕಾನೂನುಗಳು, ಭೇದಗಳು ಎಲ್ಲವನ್ನೂ ಲೋಹಿಯಾ ಸ್ವಾನುಭವದ ಮೂಲಕ ಕೂಡ ಪರೀಕ್ಷೆಗೆ ಒಳಪಡಿಸುತ್ತಿದ್ದರು. ಈ ದೃಷ್ಟಿಯಿಂದ, ಲೋಹಿಯಾ ವಸಾಹತೋತ್ತರ ಘಟ್ಟದ ಮುಖ್ಯ ನಿರ್ವಸಾಹತೀಕರಣ ಚಿಂತಕರೂ ಆಗಿದ್ದರು. ಈ ಅಂಶವನ್ನು ಭಾರತದಲ್ಲಿ ನಿರ್ವಸಾಹತೀಕರಣ ಚಿಂತನೆ ನಡೆಸಿರುವ ಅಕಡೆಮಿಕ್ ವಲಯ ಸರಿಯಾಗಿ ಗ್ರಹಿಸಿದಂತಿಲ್ಲ.

ಲೋಹಿಯಾಗೆ ಪ್ರತಿಯೊಂದು ಜೈಲಿನ ಅನುಭವವೂ ಭಾರತದ ಕಟು ವಾಸ್ತವಗಳನ್ನು ತೋರಿಸುತ್ತಿತ್ತು. ಲೋಹಿಯಾ ಲಕ್ನೋ ಜೈಲಿನಲ್ಲಿದ್ದಾಗ, ನ್ಯಾಯಾಂಗ ಹಾಗೂ ಜೈಲುಗಳ 'ಇಡೀ ಕಟ್ಟಡ ನಿಂತಿರುವುದು ಸುಳ್ಳಿನ ಸರಮಾಲೆಯ ಮೇಲೆ' ಎನ್ನಿಸತೊಡಗಿತು:

'ಈ ಸೆರೆಮನೆಯಲ್ಲಿ ಭಾರೀ ಸಂಖ್ಯೆಯಲ್ಲಿ ಸೆರೆಯಾಳಾಗಿರುವ ಖೈದಿಗಳಲ್ಲಿ ಬಹುಪಾಲು ಮಂದಿ ಭಾರತೀಯ ದಂಡಸಂಹಿತೆಯ ಸೆಕ್ಷನ್ 109ರ ಅಡಿಯಲ್ಲಿದ್ದವರು ಎಂಬುದು ನನಗೆ ಗೊತ್ತಿರಲಿಲ್ಲ. ಇದೊಂದು ಎಡಬಿಡಂಗಿ ಸೆಕ್ಷನ್. ಕೆಲವೊಮ್ಮೆ ಇಂಗ್ಲಿಷರು ನಮ್ಮಂಥ ಜನರ ಮೇಲೆ ಈ ಅಸ್ತ್ರವನ್ನು ಪ್ರಯೋಗಿಸುತ್ತಿದ್ದರು. ಇದು ಶುದ್ಧ ಅರಣ್ಯನ್ಯಾಯದ ಕಾನೂನಿನಂತೆ ಇದೆ.'

ಒಂದು ಕಾಲಕ್ಕೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾಗಿದ್ದ ಉತ್ತರ ಪ್ರದೇಶದ ಬಂದೀಖಾನೆ ಸಚಿವರು ಆ ಕಾಲದಲ್ಲಿ ಈ ಕಾನೂನಿನ ಬಗ್ಗೆ ತನ್ನಂತೆಯೇ ಹೇಳುತ್ತಿದ್ದುದನ್ನು ನೆನಪಿಸುತ್ತಾ ಲೋಹಿಯಾ ಬರೆಯುತ್ತಾರೆ:

'ಈ ಕಾನೂನು ಭಾರತದ ಸಂವಿಧಾನಕ್ಕೆ ವಿರೋಧವಾಗಿದೆ. ಪಾಪ, ನಮ್ಮ ಆ ಬಡಪಾಯಿ ಸಂವಿಧಾನ ಎಲ್ಲೆಲ್ಲಿ ಎಷ್ಟೆಷ್ಟು ಧಕ್ಕೆಗೊಳಗಾಗುತ್ತಿದೆಯೋ ಏನೋ? ನನ್ನ ಸಂದರ್ಭಕ್ಕೆ ಅನ್ವಯಿಸಿಯಷ್ಟೆ ಹೇಳುವುದಾದರೆ, ಕನಿಷ್ಠ ಸಂವಿಧಾನದ ಐದು ಮೂಳೆಗಳು ಮುರಿದಿವೆ. ದ್ರಾವಿಡ ಕಳಗಂ ಕೇವಲ ಇದರ ಪ್ರತಿ ಇಲ್ಲವೇ ಆಕೃತಿಗಳನ್ನು ಸುಟ್ಟು ಹಾಕುತ್ತಿದೆ; ಆದರೆ, ನೀವು ಹಾಗೂ ನಿಮ್ಮ ಒಡೆಯರು ಇದರ ಮೂಳೆಗಳನ್ನೇ ಮುರಿಯುತ್ತಿದ್ದೀರಿ; ಕೊಡಲಿ ಪೆಟ್ಟು ಹಾಕುತ್ತಿದ್ದೀರಿ. ಯಾರು ಹೆಚ್ಚು ದೇಶದ್ರೋಹಿಗಳು?

ಈ 109ನೇ ಸೆಕ್ಷನ್ನನ್ನು ಇನ್ನೂ ಏಕೆ ಉಳಿಸಿಕೊಂಡು ಬಂದಿದ್ದೀರಿ? ಇದರ ಹಸಿ ಸುಳ್ಳಿನ ಬಗ್ಗೆ ನಿಮಗೆ ಗೊತ್ತಿಲ್ಲವೆ? ಒಂದು ಕಬ್ಬಿಣದ ಸರಳು, ಮೇಣದ ಬತ್ತಿ, ಒಂದು ಬೆಂಕಿಕಡ್ಡಿ ಈ ಮೂರು ವಸ್ತುಗಳನ್ನು ಪೊಲೀಸರು ನ್ಯಾಯಾಲಯದಲ್ಲಿ ಹಾಜರುಮಾಡಿ, 'ಇಂಥ ಆಸಾಮಿಯ ಹತ್ತಿರ ಇವು ಸಿಕ್ಕಿದವು; ಅದೂ ಅರ್ಧರಾತ್ರಿಯಲ್ಲಿ' ಎಂದು ಹೇಳಿದರೆ ಸಾಕು, ಒಂದು ವರ್ಷದ ಶಿಕ್ಷೆ ಖಾತ್ರಿ.

ನನ್ನ ಪ್ರಕಾರ, ಉತ್ತರ ಪ್ರದೇಶದಾದ್ಯಂತ ಈ 109ನೇ ಸೆಕ್ಷನ್ ಅನ್ವಯ ಕಡೇಪಕ್ಷ ಮೂರು ನಾಲ್ಕು ಸಾವಿರ ಸೆರೆಯಾಳುಗಳಾದರೂ ಇರಬೇಕು. ಆ ಲೆಕ್ಕದಲ್ಲಿ ನೋಡಿದರೆ ದೇಶದಲ್ಲಿ ಸುಮಾರು ಅರ್ಧದಷ್ಟು ಖೈದಿಗಳು ಕಳ್ಳತನದ ದೆಸೆಯಿಂದ ಸೆರೆಯಲ್ಲಿರಬಹುದು. ಆದರೆ ಉಳಿದ ಅರ್ಧಮಂದಿ ಪೊಲೀಸರು, ನ್ಯಾಯಾಧೀಶರುಗಳು ಹಾಗೂ ಜೈಲುವ್ಯವಸ್ಥೆ ಇವುಗಳಿಂದ ಕಳ್ಳರೆನಿಸಿಕೊಂಡಿದ್ದಾರೆ.'

ಹೀಗೆ 'ಜನರನ್ನು ಕಳ್ಳರನ್ನಾಗಿ ಮಾಡುವ ನ್ಯಾಯಾಲಯ ಹಾಗೂ ನ್ಯಾಯಾಧೀಶರನ್ನು' ಕುರಿತು ಲೋಹಿಯಾ ಹೇಳುತ್ತಾರೆ: 'ಈ ಜನ ಒಂದೇ ಒಂದು ಕಬ್ಬಿಣದ ಸಣ್ಣ ಸರಳಿನಿಂದ ನೂರಾರು ಜನಕ್ಕೆ ಶಿಕ್ಷೆ ಜಾರಿ ಮಾಡಬಲ್ಲರೆಂದು ಅರ್ಥಮಾಡಿಕೊಳ್ಳಲು ನನಗೆ ಈಗ ಸಾಧ್ಯವಾಗಿದೆ. ಶಿಕ್ಷೆ ನೀಡತಕ್ಕದ್ದೆಂದು ವಾದಿಸುವವರು, ಶಿಕ್ಷೆಗೆ ಒಳಗಾಗುವವರು, ಶಿಕ್ಷೆ ನೀಡುವವರು – ಎಲ್ಲರೂ ಈ ನ್ಯಾಯ ಎಂಬುದು ಸುಳ್ಳಿನ ಗೋಪುರದ ಮೇಲೆ ನಿಂತಿದೆಯೆಂಬುದನ್ನು ಬಲ್ಲರು.'

ಕಾಲಾನಂತರದಲ್ಲಿ 109ನೇ ಸೆಕ್ಷನ್ ಬದಲಾಯಿತು.

ನಿರ್ದಯ ವ್ಯವಸ್ಥೆಯ ಕ್ರೌರ್ಯ ಕೊನೆಗೆ ತನ್ನಂಥವರ ಮೇಲೂ ತಿರುಗುವ ರೀತಿ ಕೂಡ ಲೋಹಿಯಾಗೆ ಅರಿವಾಯಿತು:

'ಮೊದಲಿಗೆ ಸರ್ಕಾರಕ್ಕೆ ಹಾಗೂ ಮ್ಯಾಜಿಸ್ಟ್ರೇಟರಿಗೆ ಕಳ್ಳಖದೀಮರ ಜೊತೆ ವ್ಯವಹರಿಸಿ ಸುಳ್ಳು ಹೇಳುವ, ಕಳ್ಳತನ ಮಾಡುವ ಚಾಳಿ ಬಂದುಬಿಡುತ್ತದೆ. ಆಮೇಲೆ ನನ್ನಂತಹ ಮನುಷ್ಯರ ಮೇಲೆ ಅದೇ ಕಳ್ಳತನ, ಸುಳ್ಳುಗಾರಿಕೆಯ ಅಸ್ತ್ರ ಪ್ರಯೋಗಿಸುತ್ತಾರೆ. ಹೇಗೂ ಅಭ್ಯಾಸವಾಗಿರುತ್ತದಲ್ಲ?'

ಸ್ವತಂತ್ರ ಭಾರತದ ಪ್ರತಿಯೊಂದು ಅಂಗವೂ ಕೊಳೆಯುತ್ತಿರುವುದು, ಈ ಕೊಳೆತದಿಂದಾಗಿ ದೇಶದ ಅಸಹಾಯಕ ಬಡಜನರ ಯಾತನೆ ಹೆಚ್ಚುತ್ತಿರುವುದು ಲೋಹಿಯಾಗೆ ಹೆಜ್ಜೆಹೆಜ್ಜೆಗೂ ಅನುಭವಕ್ಕೆ ಬರತೊಡಗಿತು:

'ಈ ಸಲ ನನಗೆ ದುಃಖ ಎಂದರೇನು, ದುಃಖದಲ್ಲಿ ತೊಳಲಾಡುತ್ತಿರುವವರ ಸ್ಥಿತಿಗತಿಗಳೇನು ಎಂಬ ವಿಚಾರದಲ್ಲಿ ಹೆಚ್ಚಿನ ತಿಳುವಳಿಕೆ ದೊರೆಯಿತು. ಪ್ರತಿಯೊಂದು ಪಟ್ಟಣದಲ್ಲೂ ಇಂಥ ದುಃಖದ ಮಡುಗಳು ಇದ್ದೇ ಇರುತ್ತವೆ ಎಂಬುದು ನನಗೆ ಈ ಮಟ್ಟಕ್ಕೆ ಅರ್ಥವಾಗಿರಲಿಲ್ಲ.'

ಸ್ವತಂತ್ರ ಭಾರತದಲ್ಲಿ ಜನತೆಯ ಪರವಾದ ಅಸಲಿ ಪ್ರಶ್ನೆಗಳನ್ನು ಎತ್ತುತ್ತಿರುವ ಬಂಡಾಯಗಾರರನ್ನು ಸರ್ಕಾರಗಳು ಕಾಣುವ ರೀತಿಯಲ್ಲಿರುವ ದೋಷವನ್ನೂ ಲೋಹಿಯಾ ಎತ್ತಿ ತೋರಿಸಿದರು.

ಬರ್ಮಾದಲ್ಲಿ ಹತ್ಯೆಯಾಗಿದ್ದ ಆಂಗ್ ಸಾನ್‌ರ ಪತ್ನಿ ಕಿನ್‌ಕುಯಿಯವರ ಸೋದರಿ ಬರ್ಮಾ ಸರ್ಕಾರದ ವಿರುದ್ಧ ಬಂಡಾಯವೆದ್ದರು. ಆಗ ಕಿನ್‌ಕುಯಿ ಆಂಗ್ ಸಾನ್ ಹೇಳಿದ ಮಾತು: 'ನಾನು ಬರ್ಮಾ ದೇಶದವಳು. ನನ್ನ ಎಲ್ಲ ಮಕ್ಕಳಿಗೂ ನಾನು ತಾಯಿಯೇ ಆಗಿದ್ದೇನೆ – ಅವರು ವಿಧೇಯರಾಗಿದ್ದರೂ ಸರಿ, ಬಂಡಾಯಗಾರರಾಗಿದ್ದರೂ ಸರಿ. ಬಂಡುಕೋರ ಮಕ್ಕಳಿಗೆ ಶಿಕ್ಷೆ ಕೊಡುತ್ತೇನೆ. ಆದರೆ, ಅವರೆಲ್ಲ ನನ್ನ ಮಕ್ಕಳೇ ಅಲ್ಲವೆ?'

ಈ ಮಾತನ್ನು ಪ್ರಧಾನಿ ನೆಹರೂಗೆ ನೆನಪಿಸುತ್ತಾ ಲೋಹಿಯಾ ಹೇಳುತ್ತಾರೆ: 'ಭಾರತಮಾತೆ ಸಹ ತನ್ನೆಲ್ಲ ಮಕ್ಕಳಿಗೂ ತಾಯಿಯೇ; ಬಂಡಾಯಗಾರ